ಸೋಲುತ್ತಾಳೆ. ಭಗ್ನಮನೋರಥಳಾಗಿ, ತನ್ನ ರೂಪವನ್ನು ತಾನೇ ನಿಂದಿಸಿಕೊಂಡು, ತಪಸ್ಸಿನಿಂದ ಅವನನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಎಷ್ಟಾದರೂ ಭಕ್ತರ ಅಧೀನನಲ್ಲವೇ ಮುಕ್ಕಣ್ಣ? ಪಾರ್ವತಿಯ ಭಕ್ತಿಯನ್ನು ಪರೀಕ್ಷೆಗೆ ಒಡ್ಡಿದಾಗಲೂ, ಅದು ಸಂದೇಹಾತೀತವಾಗಿ ಸಾಬೀತಾದಾಗ, ತಾನೇ ಪ್ರತ್ಯಕ್ಷನಾಗಿ –

ಅದ್ಯಪ್ರಭೃತ್ಯವನತಾಂಗಿ ತವಾಸ್ಮಿ ದಾಸಃ ಕ್ರೀತಸ್ತಪೋಭಿರಿತಿ ವಾದಿನಿ ಚಂದ್ರಮೌಲೌ ।
ಅಹ್ನಾಯ ಸಾ ನಿಯಮಜಂ ಕ್ಲಮಮುತ್ಸಸರ್ಜ ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ ॥

"ನಿನ್ನ ತಪಸ್ಸಿನಿಂದ ನನ್ನ ಹೃದಯವನ್ನು ಗೆದ್ದಿರುವೆ, ಇಂದಿನಿಂದ ನಾನು ನಿನ್ನ ದಾಸ" ಎಂದು ಜಗದೀಶ್ವರನಾದ ಮಹೇಶ್ವರನೇ ಹೇಳಿದನು. ಇದು ಜಗನ್ಮಾತಾಪಿತೃಗಳ ಕುಟುಂಬದ ಸಾಮರಸ್ಯಕ್ಕೆ ಮೂಲಮಂತ್ರವಾಯಿತು.

ಇದೇ ಕಾವ್ಯದಲ್ಲಿ ರತಿಮನ್ಮಥರ ಪ್ರೀತಿಯ ಕಥೆಯೂ ಹಾಸುಹೊಕ್ಕಾಗಿ ಬಂದಿದೆ. ಪಾರ್ವತಿಯ ಒಲವಿನ ಬಲೆಯಲ್ಲಿ ಶಿವನನ್ನು ಬೀಳಿಸುವೆನೆಂದು ಹೆಮ್ಮೆಯಿಂದ ಬಂದ ಮನ್ಮಥನು, ಶಿವನ ಮೂರನೆಯ ಕಣ್ಣಿನ ದಳ್ಳುರಿಯಿಂದ ಹಿಡಿಬೂದಿಯಾಗಿಬಿಟ್ಟ. ಅವನೊಡನೆ ಬಂದಿದ್ದ ಅವನ ಪ್ರೇಯಸಿ ರತಿಯ ಹೃದಯ ಅದನ್ನು ಕಂಡು ದುಃಖದ ಮಡುವಾಯಿತು. ನೋವಿನಿಂದ ನಲುಗಿದ ಅವಳು ಮಾಡಿದ ವಿಲಾಪ ಅಜನ ವಿಲಾಪಕ್ಕೆ ಸರಿಸಾಟಿಯಾಗಿದೆ.

ಕಾಳಿದಾಸನ ಖಂಡಕಾವ್ಯವಾದ 'ಮೇಘಸಂದೇಶ'ದಲ್ಲಿ ದಂಪತಿಗಳ ಪ್ರೀತಿಯೇ ಮುಖ್ಯ ವಸ್ತು. ಇದರಲ್ಲಿ ನಾಯಕ ಯಕ್ಷನು ಕುಬೇರನ ಶಾಪದಿಂದ ಒಂದು ವರ್ಷ ಪತ್ನಿಯಿಂದ ದೂರವಾಗಿ, ಏಕಾಂಗಿಯಾಗಿ 'ರಾಮಗಿರಿ' ಎಂಬ ಪ್ರದೇಶದಲ್ಲಿ ವಾಸಿಸಬೇಕಾಗುತ್ತದೆ. ವಿರಹದಿಂದ ಬೆಂದು, ನೊಂದು, ಬಸವಳಿದ ಯಕ್ಷನು ಮಳೆಗಾಲದಲ್ಲಿ ತನ್ನ ಊರು ಅಲಕಾಪಟ್ಟಣದ ಕಡೆಗೆ, ಎಂದರೆ ಉತ್ತರದಿಕ್ಕಿಗೆ, ಆಕಾಶದಲ್ಲಿ ತೇಲಿ ಹೋಗುತ್ತಿದ್ದ ಮೋಡವನ್ನು ಕಂಡು, ಅದರ ಮೂಲಕ ತನ್ನ ಪ್ರಿಯೆಯಾದ ಯಕ್ಷಿಗೆ ಸಂದೇಶವನ್ನು ಕಳುಹಿಸುತ್ತಾನೆ. ಅದರಲ್ಲಿ ಆ ದಂಪತಿಗಳ ಅನ್ಯೋನ್ಯ ಪ್ರೇಮ, ಸಾಮರಸ್ಯ ಪ್ರತಿಪಂಕ್ತಿಯಲ್ಲೂ ಅಭಿವ್ಯಕ್ತವಾಗಿದೆ. ವಿರಹದಲ್ಲಿದ್ದ ಯಕ್ಷಿಯ ಶರೀರ ಕೃಶವಾಗಿದೆ. ದೂರದೇಶದಲ್ಲಿರುವ ಇನಿಯನ ಕ್ಷೇಮದ ಚಿಂತೆ ಅವಳ ಮನವನ್ನು ತುಂಬಿದೆ.

"ನಾನು ಕ್ಷೇಮವಾಗಿದ್ದೇನೆ" ಎಂದು ಸಂದೇಶವನ್ನು ಕೊಟ್ಟು ಯಕ್ಷನು ಮುಂದಿನ ಮಾತಿನಲ್ಲಿ ಹೀಗೆನ್ನುತ್ತಾನೆ:

ಏತಸ್ಮಾನ್ಮಾಂ ಕುಶಲಿನಮಭಿಜ್ಞಾನದಾನಾದ್ ವಿದಿತ್ವಾ ಮಾಕೌಲೀನಾಚ್ಚಕಿತನಯನೇ ಮಯ್ಯವಿಶ್ವಾಸಿನೀ ಭೂಃ ।
ಸ್ನೇಹಾನಾಹುಃ ಕಿಮಪಿ ವಿರಹೇ ಧ್ವಂಸಿನಸ್ತೇ ತ್ವಭೋಗಾದ್ ಇಷ್ಟೇ ವಸ್ತುನ್ಯುಪಚಿತರಸಾಃ ಪ್ರೇಮರಾಶೀ ಭವಂತಿ ॥

"ಈ ಅಭಿಜ್ಞಾನದಿಂದ (ಗುರುತು) ನಾನು ಕುಶಲಿ ಎಂಬುದನ್ನು ತಿಳಿದುಕೊಂಡಮೇಲೆ, 'ಪತಿಪತ್ನಿಯರು ದೂರವಾದಾಗ ಪರಸ್ಪರ ಒಲವು ಕಡಿಮೆಯಾಗುತ್ತದೆ' ಎಂಬ ಜನರ ಮಾತಿನಿಂದ ನನ್ನಲ್ಲಿ ವಿಶ್ವಾಸವಿಲ್ಲದವಳಾಗಬೇಡ. ವಸ್ತುತಃ ವಿರಹದಲ್ಲಿ ಅನ್ಯೋನ್ಯಾಪೇಕ್ಷೆ ಬೆಳೆದು ಸ್ನೇಹವು ಪ್ರೇಮರಾಶಿಯಾಗಿ ಪರಿಣಮಿಸುತ್ತದೆ" ಎಂದು ಈ ಪದ್ಯದ ಭಾವ. ಹೀಗೆ ಈ ಖಂಡಕಾವ್ಯದಲ್ಲೂ ಕಾಳಿದಾಸನಿಂದ ದಾಂಪತ್ಯ ಸಾಮರಸ್ಯ ಸುಂದರವಾಗಿ ಚಿತ್ರಿತವಾಗಿದೆ.

ಇನ್ನು ನಾಟಕಗಳನ್ನು ನೋಡೋಣ. 'ಮಾಲವಿಕಾಗ್ನಿಮಿತ್ರ' ಎಂಬ ನಾಟಕದಲ್ಲಿ ರಾಜ ಅಗ್ನಿಮಿತ್ರನಿಗೆ ಧಾರಿಣೀ, ಇರಾವತೀ ಎಂಬ ಇಬ್ಬರು ರಾಣಿಯರಿರುತ್ತಾರೆ. ಧಾರಿಣಿಗೆ ವಸುಮಿತ್ರ ಎಂಬ ಮಗನಿರುತ್ತಾನೆ. ಕಾರಣಾಂತರದಿಂದ ಮಾಲವಿಕಾ ಎಂಬ ರಾಜಪುತ್ರಿ ಧಾರಿಣಿಯ ಆಶ್ರಯಕ್ಕೆ ಬರುತ್ತಾಳೆ. ಅವಳಿಗೆ ನೃತ್ಯಾಭ್ಯಾಸವನ್ನು ಗಣದಾಸನೆಂಬ ಆಚಾರ್ಯನು ಮಾಡಿಸುತ್ತಾನೆ. ಮಾಲವಿಕೆಯನ್ನು ನೋಡಿದ ರಾಜ ಅಗ್ನಿಮಿತ್ರನಿಗೆ ಅವಳಲ್ಲಿ ಅನುರಾಗ ಅಂಕುರಿಸುತ್ತದೆ. ಆಮೇಲೆ ಅವಳು ರಾಜನಿಗೆ ಕಾಣಿಸಬಾರದೆಂದು ಧಾರಿಣಿ ಅನೇಕ ಉಪಾಯಗಳನ್ನು ಮಾಡಿದರೂ, ಅವು ಸಫಲವಾಗುವುದಿಲ್ಲ. ಕಡೆಗೆ ಅವಳೇ ಸ್ವಯಂ ಎಲ್ಲ ಆಭರಣಗಳನ್ನೂ ಮಾಲವಿಕೆಗೆ ತೊಡಿಸಿ, ಪಟ್ಟೆವಸ್ತ್ರಗಳನ್ನು ಉಡಿಸಿ, ಅಗ್ನಿಮಿತ್ರನ ಕೈಹಿಡಿಸುತ್ತಾಳೆ.

ಪ್ರತಿಪಕ್ಷೇಣಾಪಿ ಪತಿಂ ಸೇವಂತೇ ಭರ್ತೃವತ್ಸಲಾಃ ಸಾಧ್ವ್ಯಃ ಎನ್ನುತ್ತಾನೆ ಕಾಳಿದಾಸ. ಗಂಗಾನದಿ ಮುಂತಾದ ಮಹಾನದಿಗಳು ಬೇರೆ ಹೊಳೆಗಳ ನೀರನ್ನೂ ಸಮುದ್ರಕ್ಕೆ ಒಯ್ಯುವಂತೆ, ಸಾಧ್ವಿಯರು ಭರ್ತೃಪ್ರೇಮದಿಂದ ಇತರ ಭಾರ್ಯೆಯರು ತಮ್ಮ ಪ್ರತಿಪಕ್ಷಗಳೇ ಆದರೂ, ಅವರ ಮೂಲಕವೂ ಪತಿಸೇವೆಯನ್ನು ಮಾಡುತ್ತಾರೆ ಎಂದು ಅವನ

ಮಾತಿನ ತಾತ್ಪರ್ಯ. **ರಾಜಾನೋ ಬಹುವಲ್ಲಭಾಃ** – ದೊರೆಗಳಿಗೆ ಹಲವರು ಪ್ರಿಯೆಯರು ಎಂಬುದನ್ನು ಅಂದಿನ ಸಮಾಜ ಒಪ್ಪಿಕೊಂಡಿತ್ತು. ಅದಕ್ಕನುಗುಣವಾಗಿ ಕಾಳಿದಾಸನು ತನ್ನ ನಾಟಕಗಳಲ್ಲಿ ದಾಂಪತ್ಯಸಾಮರಸ್ಯವನ್ನು ಚಿತ್ರಿಸಿದ್ದಾನೆ.

ವಿಕ್ರಮೋರ್ವಶೀಯಮ್ ಎಂಬ ನಾಟಕದಲ್ಲೂ ರಾಜನಾದ ಪುರೂರವನಿಗೆ ಔಶೀನರಿ ಎಂಬ ರಾಣಿ ಇರುತ್ತಾಳೆ. ಊರ್ವಶಿ ಎಂಬ ಅಪ್ಸರೆಗೆ ದಾನವನಿಂದ ತೊಂದರೆಯಾದಾಗ, ಪುರೂರವನು ಅದನ್ನು ನಿವಾರಿಸಿ ಊರ್ವಶಿಯನ್ನು ಕಾಪಾಡುತ್ತಾನೆ. ಆಗ ಅವರಿಬ್ಬರಲ್ಲಿ ಅನ್ಯೋನ್ಯ ಪ್ರೇಮ ಮೂಡುತ್ತದೆ. ಊರ್ವಶಿಯಿಂದ ಹುಟ್ಟುವ ಪುತ್ರನೇ ಪುರೂರವನ ಉತ್ತರಾಧಿಕಾರಿಯಾಗುತ್ತಾನೆ. ಇದಕ್ಕೆ ಔಶೀನರಿಯಿಂದ ಯಾವ ಅಡ್ಡಿಯೂ ಬರುವುದಿಲ್ಲ. ತನಗೆ ಇಷ್ಟವಿರಲಿ ಇಲ್ಲದಿರಲಿ, ಅನಿವಾರ್ಯವಾದುದನ್ನು ಅವಳು ಅಸಹಾಯಕತೆಯಿಂದ ಒಪ್ಪಿಕೊಂಡಳೆಂದು ಕೆಲವರು ಆಕ್ಷೇಪಿಸಬಹುದು. ಆದರೆ ನಾಟಕವನ್ನು ಓದುವಾಗ ಅಥವಾ ಅಭಿನಯವನ್ನು ರಂಗದ ಮೇಲೆ ನೋಡಿದಾಗ, ಅಲ್ಲಿ ಕೌಟುಂಬಿಕ ಸಾಮರಸ್ಯವೇ ಎದ್ದುಕಾಣುತ್ತದೆ, ವಿರಸವಲ್ಲ.

ಅಭಿಜ್ಞಾನ ಶಾಕುಂತಲದಲ್ಲಿ ದುಷ್ಯಂತ ಮಹಾರಾಜನು ತಪೋವನದಲ್ಲಿ ಶಕುಂತಲೆಯನ್ನು ನೋಡಿ, ಗಾಂಧರ್ವ ವಿವಾಹವನ್ನು ಮಾಡಿಕೊಳ್ಳುತ್ತಾನೆ. ಅವಳನ್ನು ಅಲ್ಲಿಯೇ ಬಿಟ್ಟು, ರಾಜಧಾನಿಗೆ ಹಿಂದಿರುಗುತ್ತಾನೆ. ಗರ್ಭಿಣಿಯಾಗಿದ್ದ ಅವಳನ್ನು ತಂದೆ ಕಣ್ವರು ತಪಸ್ವಿಗಳೊಡನೆ ರಾಜಧಾನಿಗೆ ಕಳುಹಿಸಿದಾಗ, ದುರ್ವಾಸರ ಶಾಪದಿಂದ ಅವಳನ್ನು ಮರೆತಿದ್ದ ದುಷ್ಯಂತನು ಅವಳನ್ನು ತಿರಸ್ಕರಿಸುತ್ತಾನೆ. ಹಿಂದಿನ ಸಂದರ್ಭಗಳನ್ನು ವರ್ಣಿಸಿ, ಅವನಿಗೆ ತನ್ನ ನೆನಪನ್ನು ತಂದುಕೊಡಲು ಶಕುಂತಲೆ ಪ್ರಯತ್ನಿಸಿದಾಗ, "ಇಂಥ ಜಾಣತನ ಹೆಣ್ಣಿಗೆ ಹುಟ್ಟಿನಿಂದಲೇ ಸಿದ್ಧಿಸಿರುತ್ತದೆ" ಎಂದು ಹೀಯಾಳಿಸುತ್ತಾನೆ.

ಸ್ತ್ರೀಣಾಮಶಿಕ್ಷಿತಪಟುತ್ವಮಮಾನುಷೀಷು ಸಂದೃಶ್ಯತೇ ಕಿಮುತ ಯಾಃ ಪ್ರತಿಬೋಧವತ್ಯಃ ।
ಪ್ರಾಗಂತರಿಕ್ಷಗಮನಾತ್ ಸ್ವಮಪತ್ಯಜಾತಮ್ ಅನ್ಯೈರ್ದ್ವಿಜೈಃ ಪರಭೃತಾಃ ಕಿಲ ಪೋಷಯಂತಿ ॥

ಹೆಣ್ಣು ಕೋಗಿಲೆಗಳು ತಮ್ಮ ಮೊಟ್ಟೆಗಳನ್ನು ಬೇರೆ ಹಕ್ಕಿಗಳ ಗೂಡಿನಲ್ಲಿ ಇಟ್ಟು, ಬೆಳೆಸುತ್ತವೆ. ಪ್ರಾಣಿಗಳಲ್ಲಿ ಪಕ್ಷಿಗಳಲ್ಲಿ ಇಂಥ ಜಾಣತನ ಇರುವಾಗ ವಿದ್ಯಾಭ್ಯಾಸ ಪಡೆದ ಹೆಂಗಸರಲ್ಲಿ ಬೇರೆ ಹೇಳುವುದು ಏನಿದೆ? ಎಂಬುದು ದುಷ್ಯಂತನ ಅಭಿಪ್ರಾಯ. ಹೀಗೆ ಪರಿತ್ಯಕ್ತಳಾದ ಶಕುಂತಲೆಯನ್ನು ತಾಯಿ ಮೇನಕೆಯು ಗಗನಮಾರ್ಗದಿಂದ ಕರೆದೊಯ್ಯುತ್ತಾಳೆ. ಹಲವು ವರ್ಷಗಳು ಕಳೆದ ಮೇಲೆ ಮತ್ತೆ ಋಷ್ಯಾಶ್ರಮದಲ್ಲಿ ದುಷ್ಯಂತ–ಶಕುಂತಲೆಯರ ಭೇಟಿ, ಅವರ ಮಗ ಸರ್ವದಮನನ ಮೂಲಕ ಆಗುತ್ತದೆ. ಶಾಪ ಕಳೆದು, ಶಕುಂತಲೆಯ ನೆನಪಿನಲ್ಲಿ ಸವೆದಿದ್ದ ದುಷ್ಯಂತನು ಪಶ್ಚಾತ್ತಾಪದಗ್ಧನಾಗಿ, ಅವಳನ್ನು ಸ್ವೀಕರಿಸುತ್ತಾನೆ. ಈ ನಾಟಕದಲ್ಲಿ ನಾಯಕನು ಪತ್ನಿಯೊಡನೆ ಸಾಮರಸ್ಯದಿಂದ ಜೀವಿಸಿದ್ದ ದೃಶ್ಯ ವರ್ಣಿತವಾಗಿಲ್ಲ. ಅವನ ಇನ್ನೊಬ್ಬ ಪತ್ನಿ ಹಂಸಪದಿಕೆ ರಂಗದ ಮೇಲೆ ಕಾಣಿಸಿಕೊಳ್ಳುವುದೇ ಇಲ್ಲ. ಅವಳ ವಿರಹಗೀತೆ ಮಾತ್ರ ಶ್ರವಣಗೋಚರವಾಗುತ್ತದೆ. ಮುಂದೆ ದುಷ್ಯಂತ–ಶಕುಂತಲೆಯರ ಜೀವನ ಸಾಮರಸ್ಯದಿಂದ ತುಂಬಿದ್ದಿರಬೇಕೆಂದು ನಾವು ಊಹಿಸಿಕೊಳ್ಳಬಹುದು. •

### ಬುದ್ಧ ಮತ್ತು ಮಹಿಳೆ

**ಮಹಿಳೆಯೊಬ್ಬಳು ಬುದ್ಧನ ಬಳಿಗೆ ಬಂದು, "ನಾನು ಬಂಜೆ, ಮಕ್ಕಳನ್ನು ಪಡೆಯಬೇಕೆಂಬ ಆಸೆ ನನ್ನಲ್ಲಿ ತೀವ್ರವಾಗಿದೆ. ದಯಮಾಡಿ ನನಗೆ ಸಂತಾನವಾಗುವಂಥ ವರವನ್ನು ನೀಡಿ" ಎಂದು ಬೇಡಿಕೊಂಡಳು. "ಆಗಲಿ, ನಾಳೆ ಮಧ್ಯಾಹ್ನ ಒಂದು ಪಾತ್ರೆ ತುಂಬ ಹಾಲು ಪಾಯಸ ಮಾಡಿ ತೆಗೆದುಕೊಂಡು ಬಾ. ನಿನ್ನ ಮನಸ್ಸು, ಹೃದಯಗಳು ನಿರ್ಮಲವಾಗಿರಲಿ" ಎಂದು ಬುದ್ಧ ತಿಳಿಸಿದ.**

**ಮರುದಿನ ಮಹಿಳೆ ಮಧ್ಯಾಹ್ನ ಪಾತ್ರೆಯಲ್ಲಿ ಹಾಲು ಪಾಯಸ ತಂದಾಗ ಅದರಲ್ಲಿ ತುಂಬ ಪಾಯಸವಿರುವುದನ್ನು ಕಂಡ ಬುದ್ಧ, "ನೀನು ಬೀದಿಯಲ್ಲಿ ಘಮಘಮಿಸುವ ಪಾಯಸ ತರುವಾಗ ನಿನ್ನ ಹತ್ತಿರ ಯಾರೂ ಅದನ್ನು ಬೇಡಲಿಲ್ಲವೇ?" ಎಂದು ಕೇಳಿದ."ಓಹೋ, ಬೀದಿಯುದ್ದಕ್ಕೂ ಯಾರ್‍ಯಾರದೋ ಮಕ್ಕಳು ಬೆನ್ನತ್ತಿ ಕಿತ್ತುಕೊಳ್ಳಲು ಬಂದವು. ಅವರ ಕೈಗೆ ಸಿಗದಂತೆ ಪಾಯಸವನ್ನಿಲ್ಲಿಗೆ ತರಲು ನನಗೆ ಸಾಕುಬೇಕಾಯಿತು" ಎಂದಳು ಮಹಿಳೆ. ಬುದ್ಧ ವ್ಯಸನಗೊಂಡು ಹೀಗೆ ಹೇಳಿದ: "ಅಮ್ಮ, ಇನ್ನೊಬ್ಬರ ಮಕ್ಕಳನ್ನು ಕಂಡರೆ ನಿನ್ನದು ಎಂದೇ ಭಾವಿಸಿ, ಬಳಿಗೆ ಕರೆದು, ಒಂದು ಚೂರು ಸಿಹಿಕೊಡಬಲ್ಲ, ಉದಾರ ಹೃದಯ, ಎಲ್ಲರನ್ನೂ ಪ್ರೀತಿಸುವ ಮನೋಭಾವ ನಿನ್ನಲ್ಲಿ ಇಲ್ಲದ ಮೇಲೆ ನೀನು ನಿನ್ನದನ್ನು ಪ್ರೀತಿಸಬಲ್ಲೆಯಾ? ಇನ್ನೊಬ್ಬರಿಗೆ ಕೊಡಲಾರದುದು ನಿನ್ನ ಮಗುವಿಗೇನು ಕೊಡಬಲ್ಲೆ? ಮಕ್ಕಳಿಗೆ, ಹಸಿದವರಿಗೆ ತೃಪ್ತಿ ನೀಡದ ಈ ಪಾಯಸ ನನಗೂ ಬೇಡ"**

**(ಆಧಾರ : *ದೊಡ್ಡವರ ದಾರಿ*, ಸಂಪಾದಕರು: ಟಿ.ವಿ. ವೆಂಕಟರಾಮಯ್ಯ)**

# ಕೌಟುಂಬಿಕ ಸಮಸ್ಯೆಗಳು ಮತ್ತು ಪರಿಹಾರಗಳು

ಡಾ.ಬಸವರಾಜ ಸಿದ್ಧಾಶ್ರಮ



**ಮಾ**ನವನು ನಾಗರಿಕ ಪಥದಲ್ಲಿ ಪದಾರ್ಪಣೆ ಮಾಡುತ್ತಿದ್ದಂತೆ ಕುಟುಂಬ ವ್ಯವಸ್ಥೆ ಜಾರಿಗೆ ಬಂದಿತು. ಅದಕ್ಕೂ ಮೊದಲು ಸಾಮೂಹಿಕ ಜೀವನ ವ್ಯವಸ್ಥೆಯಾಗಿ ಸಮುದಾಯದ ಪರಿಕಲ್ಪನೆ ಇದ್ದಿತು. ನಾಗರಿಕ ವ್ಯವಸ್ಥೆಯಲ್ಲಿದ್ದಂತೆ ತಂದೆ–ತಾಯಿ, ಗಂಡ–ಹೆಂಡತಿ–ಮಕ್ಕಳು ಇತ್ಯಾದಿ ಸಂಬಂಧ–ಬಂಧ ಆಗ ಅಷ್ಟಾಗಿ ಇರಲಿಲ್ಲ. ಈ ಮಾತನ್ನು ಸಮಾಜಶಾಸ್ತ್ರಜ್ಞರು ಅನುಮೋದಿಸುತ್ತಾರೆ. ಕುಟುಂಬಗಳಲ್ಲಿ ಎರಡು ಬಗೆ: ಅವಿಭಕ್ತ ಮತ್ತು ವಿಭಕ್ತ(ವಿಭಜಿತ) ಕುಟುಂಬ. ಅವಿಭಕ್ತ ಕುಟುಂಬಗಳಲ್ಲಿ ೩–೪ ತಲೆಮಾರಿನ ಸದಸ್ಯರು ಜೊತೆಯಾಗಿ ಬಾಳುತ್ತಾರೆ. ಅಲ್ಲಿ ಮುತ್ತಜ್ಜ–ಮುತ್ತಜ್ಜಿಗಳಿಂದ ಹಿಡಿದು ಮರಿ–ಗಿರಿ ಮೊಮ್ಮಕ್ಕಳೂ ಕಲೆತು ಬಾಳುತ್ತಾರೆ. ವಿಭಕ್ತ ಕುಟುಂಬಗಳಲ್ಲಿ ಗಂಡ–ಹೆಂಡತಿ ತಮ್ಮ ಒಬ್ಬಿಬ್ಬರು ಮಕ್ಕಳೊಂದಿಗೆ ಜೀವಿಸುತ್ತಾರೆ. ವಿರಳವಾಗಿ ಕೇವಲ ಕೆಲವೇ ಹಳ್ಳಿಗಳಲ್ಲಿ ಕಾಣಸಿಗುವ ಅವಿಭಕ್ತ ಕುಟುಂಬಗಳ ಪರಿಕಲ್ಪನೆಯು ನಾಗಾಲೋಟದಲ್ಲಿ ಸಾಗಿರುವ ನಾಗರಿಕ ಸಮಾಜ ವ್ಯವಸ್ಥೆಯಲ್ಲಿ ಕೊಚ್ಚಿಹೋಗುತ್ತಿದೆ. ಹಾಗೆ ನೋಡಿದರೆ, ಅವಿಭಕ್ತ ಕುಟುಂಬದಲ್ಲಿ ಪರಸ್ಪರ ಪ್ರೀತಿ–ವಿಶ್ವಾಸ, ಸಹಾಯ–ಸಹಕಾರ, ರಕ್ಷಣೆ–ಭದ್ರತೆಗಳು ಹಾಸುಹೊಕ್ಕಾಗಿರುವುದರೊಂದಿಗೆ, ಹಿರಿಯರು ಕಿರಿಯರಿಗೆ ಲೋಕಜ್ಞಾನ, ಪ್ರೀತಿ–ಕರುಣೆಗಳ ಗಣಿಯಾಗಿ ಕುಟುಂಬವನ್ನು ಮುನ್ನಡೆಸುತ್ತಿದ್ದರು. ಹಿರಿಯರಿಗೂ ಮಕ್ಕಳು–ಮೊಮ್ಮಕ್ಕಳು ಮರಿಮಕ್ಕಳ ಪ್ರೀತಿ–ಒಡನಾಟದಿಂದ ಸೂಕ್ತರಕ್ಷಣೆ–ಜೀವನೋತ್ಸಾಹಗಳು ದೊರೆತು ಒಂಟಿತನ ಕಾಡುತ್ತಿರಲಿಲ್ಲ. ಇಂದಿನ ಸಾಮಾನ್ಯ ರೋಗಗಳಾದ ಮಾನಸಿಕ ಒತ್ತಡ, ಹತಾಶೆ, ಭಯ, ಉದ್ವೇಗ ಮತ್ತು ಇವುಗಳಿಂದ ಉದ್ಭವಿಸುತ್ತಿರುವ ಅನೇಕ ಮನೋ–ದೈಹಿಕ ರೋಗಗಳು ಆಗ ಇರಲಿಲ್ಲ. ಎಲ್ಲಿ ಶಿಸ್ತು–ಸಂಯಮ–ಅಭಯ ಮತ್ತು ನೆಮ್ಮದಿ ಇದೆಯೋ, ರೋಗಗಳಿಗೆ ಅಲ್ಲೆಲ್ಲಿ ಸ್ಥಾನ? ಇಂತಹ ಕುಟುಂಬವ್ಯವಸ್ಥೆಯಿರುವ ಸಮಾಜ ಸುಖೀಸಮಾಜವಾಗಿತ್ತು.

ವಿಭಜಿತ ಕುಟುಂಬ ವ್ಯವಸ್ಥೆಯು ಔದ್ಯೋಗಿಕರಣದ ಮತ್ತು ಅತಿ ನಾಗರೀಕತೆಯ ಆವಿಷ್ಕಾರ. ಸ್ವತಂತ್ರ ಬದುಕಿನ ಹುಡುಕಾಟ, ಆರ್ಥಿಕ ಭದ್ರತೆ ಮತ್ತು ಪರವೂರಿಗೆ ನೌಕರಿಗೆ ವಲಸೆ ಹೋಗುವ ಸನ್ನಿವೇಶ– ಇವು ಕುಟುಂಬವು ವಿಭಜಿಸಲು ಕಾರಣಗಳು. ಅಲ್ಲದೇ, ಈಗಿನ ದಿನಗಳಲ್ಲಿ, ಅವಿಭಕ್ತ ಕುಟುಂಬಗಳು ವಿಭಜಿತವಾಗಲು, ಅಗತ್ಯವಾದ ಸಂಪನ್ಮೂಲಗಳ ಕೊರತೆಯೂ ಒಂದು ಮುಖ್ಯ ಕಾರಣವಾಗಿದೆ.

ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯಲ್ಲಿ ಅವಿಭಕ್ತ ಕುಟುಂಬಗಳು ವಿಭಜನೆಗೊಂಡವು. ಆ ಮೂಲಕ ಅನೇಕ ರೀತಿಯ ಒತ್ತಡಗಳು ಉಂಟಾಗಿ ವ್ಯಕ್ತಿ ಜೀವನ ಆತಂಕಮಯವಾಯಿತು. ಈ ಸಮಸ್ಯೆಗೆ ಆಧ್ಯಾತ್ಮಿಕ ಮನೋಭಾವವೊಂದೇ ಪರಿಹಾರ. ಇದನ್ನು ವಿದ್ವತ್ಪೂರ್ಣವಾಗಿ ವಿವರಿಸಿರುವ ಲೇಖಕರು ಕರ್ನಾಟಕ ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕರು. ಹೆಸರಾಂತ ವಿದ್ವಾಂಸರಾದ ಇವರು ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ.